


### ಎಡದಿಂದ ಬಲಕ್ಕೆ

1. ಅಪಾಯ ತಪ್ಪಿಸಲು ಇದೊಂದು ಒಳ್ಳೆಯ ತಂತ್ರ 4
3. ವಿದೇಶೀ ವಾಹನಗಳನ್ನು ಕಂಡರೆ ಆತನಿಗೆ ಬಿಡಲಾರದ ಪ್ರೀತಿ, ಸೆಳೆತ 3
4. ಶನಿಯಾದರೇನು? ಆತನೂ ಮಲಗಲೇಬೇಕು. ಮಾಡಲೇಬೇಕು ನಿದ್ರೆ 3
6. ಗಂಡಸರ ಸಮ್ಮೇಳನದಲ್ಲಿ ಏನಿಂಥ ಉತ್ಸಾಹ, ಸಂತಸ 4
8. ಆತ ಗಸಗಸೆ ಬೆಳೆದಿರುವ ಕುರಿತು ಗುಟ್ಟುಮಾತು 4
10. ಕನ್ನಡಿಯ ಎದುರು ನಿಂತು ಕೆಟ್ಟ ಮಾತುಗಳು ಏಕೆ? 4
12. ಆ ರಾಣಿಯ ಆಭರಣಗಳು ಆಕೆಯಂತೆಯೇ ಎಷ್ಟೊಂದು ಸುಂದರ! 4
16. ಸುಂದರ ಪಲ್ಲಕ್ಕಿಯನ್ನು ಕಂಡರೇ ರೋಮಾಂಚನ 3
17. ಆಕೆಯ ಕಚೇರಿಯಲ್ಲಿ ನಡೆದ ಪ್ರಸಂಗಗಳೆಲ್ಲವೂ ಒಳ್ಳೇ ರುಚಿಕರ 3
18. ರಪರಪ ಬಡಿದಾಟ; ಯುದ್ಧದಂತಹ ಗಲಾಟೆ 4

### ಮೇಲಿನಿಂದ ಕೆಳಕ್ಕೆ

1. ಹೊಸ ಹೊಸ ತರಹದ ವಸ್ತುಗಳು ಒಟ್ಟು ಒಂದು ಸಾವಿರ 3
2. ಶ್ರೇಯಸ್ಕರವಾದ ಎಲ್ಲ ಕೆಲಸಗಳಲ್ಲೂ ಸಿಕ್ಕೇ ಸಿಗುತ್ತದೆ ವಿಜಯ 3
3. ವಯಸ್ಸಿಗೆ ತಕ್ಕಂತೆ ನಡೆದಿದೆ ಆತನ ವಿದ್ಯಾಭ್ಯಾಸ 3
5. ಸೊಪ್ಪಿನ ವ್ಯಾಪಾರ ಮಾಡುತ್ತಲೇ ಬರೆದ ಪರೀಕ್ಷೆಯಲ್ಲಿ ಆತ ಅನುತ್ತೀರ್ಣ 3
6. ಸನಿಕೆ ಹಿಡಿದು ಸಹಾಯಕ್ಕೆ ಬಂದದ್ದು ಆತನ ಒಳ್ಳೆಯತನ 4
7. ಗುಡ್ಡದ ಮೇಲೆ ಎಷ್ಟು ಸುಂದರವಾಗಿದೆ ರಾಮ ದೇವಸ್ಥಾನ! 4
8. ಗೊತ್ತಿರುವವರು ಜೊತೆಗೇ ಇದ್ದರೂ ಆತನ ಜವಾಬ್ದಾರಿ ತುಂಬ ದೊಡ್ಡದು 4
9. ಆ ಸುಪುತ್ರಿಯರ ತಂದೆ ದೇವತೆಗಳಿಗೆ ಇಷ್ಟವಾದವನು 4
11. ಪುಣ್ಯವಂತನ ಮಾತು; ಸ್ವಲ್ಪವೂ ಒರಟಿಲ್ಲ 3
13. ಬಡ ಜನರ ಮುರುಕು ಮನೆಗಳನ್ನು ಕಂಡರೇ ಅಯ್ಯೋ ಪಾಪ ಎನಿಸುತ್ತದೆ 3
14. ತುಂಬ ಮಾರಕವಾದ ಪ್ರಾಣಿ ಮೊಸಳೆ 3
15. ಎಂಥ ಅಪರೂಪದ ವ್ಯಕ್ತಿ, ಆದರೂ ಅದೇನೋ ಆಪಾದನೆ 3

---

### 05–09–2024 ಉತ್ತರಗಳು

**ಎಡದಿಂದ ಬಲಕ್ಕೆ**

1. ಪತಂಗ 3. ಪ್ರಮಾದ 4. ದಕ್ಷತೆ 6. ಪರಿಣಯ 7. ಹಗೆತನ 9. ಕೆಳಗಡೆ 11. ಕಂಬಸಾಲು 15. ರಜತ 16. ಲಡಾಯಿ 17. ನಡುಕ

**ಮೇಲಿನಿಂದ ಕೆಳಕ್ಕೆ**

1. ಪದಕ 2. ಗದರು 3. ಪ್ರವೀಣ 5. ತೆರಿಗೆ 6. ಪತಾಕೆ 8. ನವಿಲು 10. ಗಮಾರ 12. ಬಡಾಯಿ 13. ವೇತನ 14. ಚಾಲಕ

ಪ್ರಶ್ನಾಂಕಣ

# ಸಿಕ್ಕಿತೇ ದ್ವಿತೀಯ ಅತಿ ದೈತ್ಯ ವಜ್ರ?

ಇದೇ ಕಳೆದ ಆಗಸ್ಟ್ 22ರಂದು ಆಫ್ರಿಕಾ ಖಂಡದ, ಬೋಟ್ಸ್ವಾನಾ (Botswana) ರಾಷ್ಟ್ರದಲ್ಲಿ ಅತ್ಯದ್ಭುತ ನಿಧಿಯೊಂದು ಪತ್ತೆಯಾಯಿತು. ಬೋಟ್ಸ್ವಾನಾ ದೇಶದ ರಾಜಧಾನಿ ಗಬರೋನೆ (Gabarone) ಯಿಂದ ಸುಮಾರು 500 ಕಿ.ಮೀ ಉತ್ತರಕ್ಕಿರುವ ಕಾರೋ (Karowe ) ವಜ್ರದ ಗಣಿಯಲ್ಲಿ ಅಂದು 2492 ಕ್ಯಾರಟ್ ತೂಕದ, ಎಂದರೆ 498 ಗ್ರಾಂ (5 ಕ್ಯಾರಟ್=1 ಗ್ರಾಂ) ತೂಕದ, ಹಿಡಿ ಗಾತ್ರದ, ಬೃಹತ್ ವಜ್ರದ ಹರಳೊಂದು ಪತ್ತೆಯಾಯಿತು. ಇದೊಂದು ರೋಮಾಂಚನಕಾರೀ ಶೋಧ. ಏಕೆಂದರೆ, ಸಾಮಾನ್ಯವಾಗಿ ವಜ್ರ ಕೆಲವೇ ಕ್ಯಾರಟ್ ತೂಕದ ಚಿಕ್ಕ ಪುಟ್ಟ ಹರಳುಗಳಾಗಿಯಷ್ಟೇ (ಚಿತ್ರ2) ಲಭ್ಯ. ನೂರಾರು ಕ್ಯಾರಟ್ ತೂಕದ ದೊಡ್ಡ ಗಾತ್ರದ ಹರಳುಗಳು (ಚಿತ್ರ1) ಸಿಗುವುದು ತುಂಬ ಅಪರೂಪ. ಇನ್ನು ಸಾವಿರಾರು ಕ್ಯಾರಟ್ ತೂಕದ ವಜ್ರದ ಬೃಹತ್ ಹರಳುಗಳು ಲಭಿಸುವುದಂತೂ ವಿಪರೀತ ಅಪರೂಪ.

ವಿಸ್ಮಯ ಏನೆಂದರೆ ಲ್ಯೂಕಾರಾ ಡೈಮಂಡ್ ಕಾರ್ಪೊರೇಷನ್‌ನ ಇದೇ ಕಾರೋ ವಜ್ರದ ಗಣಿಯಲ್ಲೇ ಕಳೆದ ಒಂದೇ ದಶಕದಲ್ಲಿ ನೂರಾರು ಕ್ಯಾರಟ್ ತೂಕದ ವಜ್ರದ ನಾಲ್ಕು ಹರಳುಗಳು ದೊರಕಿವೆ. ಆ ನಾಲ್ಕರಲ್ಲೂ ಅತ್ಯಂತ ದೊಡ್ಡ ಗಾತ್ರ ಹೊಂದಿದ್ದ ದಿ ಕಾನ್ಸ್ಟಲೇಶನ್ ವಜ್ರ 813 ಕ್ಯಾರಟ್ (163 ಗ್ರಾಂ) ತೂಕ ಇತ್ತು. 2016ರಲ್ಲಿ ಆ ವಜ್ರ 63 ದಶಲಕ್ಷ ಡಾಲರ್‌ಗಳಿಗೆ, ಎಂದರೆ 504 ಕೋಟಿ ರೂಪಾಯಿಗಳಿಗೆ ಮಾರಾಟವಾಯಿತು. ಇದೀಗ ಪತ್ತೆಯಾಗಿರುವ ಲೂಕಾರಾ ವಜ್ರದ ಮೌಲ್ಯ 160 ದಶಲಕ್ಷ ಡಾಲರ್, ಎಂದರೆ 12,800 ಕೋಟಿ ರೂ. ಆಗಬಹುದು ಎಂದು ಅಂದಾಜಿಸಲಾಗಿದೆ!

ಈಗ ಲಭ್ಯವಾಗಿರುವ ಲೂಕಾರಾ ವಜ್ರದ ಮತ್ತೊಂದು ವಿಕ್ರಮ ಏನೆಂದರೆ 1905ರಿಂದ ಈಚೆಗೆ ಲಭಿಸಿರುವ ಅತ್ಯಂತ ದೊಡ್ಡ ಗಾತ್ರದ ವಜ್ರ ಇದೇ! 1905ರಲ್ಲಿ ದಕ್ಷಿಣ ಆಫ್ರಿಕಾ ದೇಶದಲ್ಲಿ ದೊರಕಿದ 3106 ಕ್ಯಾರಟ್ (621 ಗ್ರಾಂ) ತೂಕದ ಕಲ್ಲಿನನ್ ವಜ್ರದ್ದು ಗಾತ್ರದಲ್ಲಿ ಈಗಲೂ ಪ್ರಥಮ ಸ್ಥಾನದ ವಿಶ್ವದಾಖಲೆ! ಅಲ್ಲಿಂದ 129 ವರ್ಷಗಳ ನಂತರ ಇದೀಗ ಲಭಿಸಿರುವ ಲೂಕಾರಾ ವಜ್ರದ್ದು ದ್ವಿತೀಯ ಸ್ಥಾನ.

ವಜ್ರದ ಹರಳುಗಳು ವಾಸ್ತವವಾಗಿ ಧರೆಯ ಅಂತರಾಳದಲ್ಲಿ, ಭೂ ತೊಗಟೆಯ ಕೆಳಗಿನ ಕವಚ (Mantle) ದಲ್ಲಿ, ನೆಲದಿಂದ 150 ರಿಂದ 450 ಕಿ.ಮೀ. ಆಳಗಳಲ್ಲಿ, ಅಲ್ಲಿನ ಅತೀವ ಶಾಖ ಮತ್ತು ಒತ್ತಡಗಳಲ್ಲಿ ಮೈದಳೆಯುತ್ತವೆ. ಜ್ವಾಲಾಮುಖಿಗಳು ಸ್ಫೋಟಗೊಂಡಾಗ ಅಲ್ಲಿಂದ ಕಿಂಬರ್ಲೈಟ್ ಕೊಳವೆಗಳ ಮೂಲಕ ನೆಲದ ಕಡೆಗೆ ಏರಿ ಬಂದು ಕವಚದಲ್ಲಿ ಹರಡಿಕೊಳ್ಳುತ್ತವೆ.




ಗಣಿಗಳಲ್ಲಿ ಪ್ರಾಪ್ತವಾಗುವ ಒಟ್ಟು ವಜ್ರದ ಹರಳುಗಳಲ್ಲಿ ಪ್ರತಿ ನೂರಕ್ಕೆ ಒಂದೆರಡು ಹರಳುಗಳು ಮಾತ್ರ ಪರಿಶುದ್ಧವಾಗಿರುತ್ತವೆ. ಲೂಕಾರಾ ವಜ್ರವೂ ಸೇರಿದಂತೆ ಪ್ರಸ್ತುತ ಲಭಿಸುತ್ತಿರುವ ಎಲ್ಲ ವಜ್ರದ ಹರಳುಗಳೂ ಮೈದಳೆದದ್ದು ಬಿಲಿಯಾಂತರ ವರ್ಷಗಳ ಹಿಂದೆ; ಕವಚದಿಂದ ತೊಗಟೆಗೆ ಬಂದು ತಲುಪಿದ್ದು ಒಂಬತ್ತು ಕೋಟಿ ವರ್ಷ ಹಿಂದೆ!

■ ಎನ್. ವಾಸುದೇವ್